# ಲಯಾಕಾರ ವಿನ್ಯಾಸಕರ ನುಡಿ

ನಾನು, ಕಲ್ಯಾಣ ಬನವಾಸಿ ವಿಜಯನಗರ ಮೇಲುಕೋಟೆ ಶಂಭುಲಿಂಗನ ಬೆಟ್ಟ ಶಿವಮೊಗ್ಗ ಚಿತ್ರದುರ್ಗ ಆಂಧ್ರ ತಮಿಳುನಾಡು ಎಂದು ಮುಂತಾಗಿ ದಕ್ಷಿಣ ಭಾರತದ ಕರ್ಮಭೂಮಿಯನ್ನೆಲ್ಲಾ ಪ್ರವಾಸಮಾಡಿ ಸುಮಾರು 60 ವರ್ಷಗಳಾದ ಮೇಲೆ ಮೈಸೂರಿಗೆ ಬಂದುದೇ ಕ್ರಿ. ಶ. 2006ರಲ್ಲಿ– ಕುಸುಮ ಬಾಲೆ ಓದುತ್ತಾ– ನನ್ನ ಆಧ್ಯಾತ್ಮಿಕ ಸಂಚಾರದಲ್ಲಿ ನಾನು ಆಲಿಸಬೇಕೆಂದಿದ್ದ ಈ ಸೂಕ್ಷ್ಮ ಸಂವೇದನೆಯು ಜನರ ವೇದನೆಯನ್ನು ಕಳೆಯಲು ಸಣ್ಣಗೆ ಹಾಡಿದ ಸಂತೈಕೆಯ ಸ್ವರದ ಸಂಜೀವಿನಿ ಧ್ವನಿಯಂತೆ ಕೇಳಿಸಿತು.

ಎಲ್ಲಿಯೂ ವಾಚ್ಯ ಮಾಡದ ಕುಶಾಲು ಚೇಷ್ಟೆ ವಿಡಂಬನೆಗಳಿಂದಲೇ ಸುತ್ತಿದ ಒಂದು ಕರುಣೆಯ ಕತೆಯನ್ನು ಕಾರುಣ್ಯದಿಂದಲೇ ಹೇಳಿದಂತಿರುವ ಈ ಕುಸುಮಬಾಲೆಯ ಪುಟಗಳನ್ನು ಮರಳಿ ಮೊದಲಿನಿಂದ ತಿರುವಿ ಹಾಕುತ್ತಾ– ಕ್ರಿಸ್ತನು ಸತ್ತ ಮೇಲೆ ಅವನ ಶಿಷ್ಯರು ಬಿಟ್ಟ ನಿಟ್ಟುಸಿರಿನಂತೆಯೆ ಇದಾಗಿದ್ದು– ತನ್ನ ದುಃಖವನ್ನು ರೂಪಾಂತರದಲ್ಲಿ ಕಥೆ ಮಾಡಿ ಹೇಳುತ್ತಲಿರುವಂತೆನಿಸಿತು. ಇದು ಹೊರಗಿನಿಂದ ಹೇಳಿದ ಕೇವಲ ಸಾಹಿತ್ಯವಲ್ಲ, ಒಳಗಿನಿಂದ ಅರಳಿದ ಅನುಭವ ಎಂದು ಸಹೃದಯ ಇದನ್ನು ಒಪ್ಪುವುದರಲ್ಲಿ ಅತಿಶಯವೇನೂ ಇಲ್ಲ.

ಮಹಾದೇವ ಅನುಸರಿಸಿರುವ ಕಥನ ರೀತಿಯು ಜಾನಪದೀಯವಾಗಿ ಕಂಡರೂ ಅದು ಸಂಪೂರ್ಣ ಜಾನಪದೀಯವಲ್ಲ. ಪಂಪನು ದೇಸೀ –ಮಾರ್ಗಗಳನ್ನು ಮಿಶ್ರ ರೂಪಮಾಡಿ ಹೊಸ ತಿರುಳ್ಗನ್ನಡವನ್ನು ಕಂಡುಕೊಂಡಂತೆ ಮಹಾದೇವ ಕೂಡ ಜಾನಪದೀಯ ಮತ್ತು ಚಾಲ್ತಿಯ ರೀತಿಗಳನ್ನು ಮಿಶ್ರಮಾಡಿ ಭಾಷೆಯನ್ನು ಹೇಗೋ ಹಾಗೆ ಕಥನ ರೀತಿಯನ್ನೂ ಒಂದು ವಿಶಿಷ್ಟ ಮಿಶ್ರಣದಲ್ಲಿ ಪಂಚಲೋಹಪಾಕ ಮಾಡಿದ್ದಾರೆ.

"ಆ ಬೆಳಕು ತನ್ನ ಶಕ್ತಿ ಮೀರಿ ಹಬ್ಬಿಯೂ ಕಣ್ಗಳ ಓಡಿಸಿದಷ್ಟೂ ಇನ್ನೂವಿ ಕಂಡುಬರುತ್ತಿದ್ದ ಆ ಒಂದೂರಷ್ಟಿದ್ದ ಹಟ್ಟಿಯ ಒಕ್ಕಡ ಮೂಲೇನಾದರು ತಲಪಲು ಅದಕ್ಕಾಗದೆ ಏದುಸಿರಾಗಿ ನಿಂತಿತು" –ಇಂಥ ಅನೇಕ ಸಂದರ್ಭಗಳಲ್ಲಿ ಮಹಾದೇವ ಶೂನ್ಯ ಪದಾರ್ಥಗಳನ್ನು ಸಮಾನ ಕುತೂಹಲದಿಂದ ಗಣನೆಮಾಡುತ್ತಾ ಇಲ್ಲೆಲ್ಲ ಭಾಷೆ – ಅದು ಗ್ರಾಮ್ಯವೇ ಆದರೂ – ಅಲ್ಲಿಯೂ ಯಥಾರೂಪದಲ್ಲಿರದೆ ಕಾವ್ಯದ ಆವೇಶದಲ್ಲಿ ಕಾಮರೂಪಿಯಾಗಿ ಬಿಡುತ್ತದೆ. ಹಾಗೆಯೇ ಜ್ಯೋತಮ್ಮನ ಬಾಯಿಯಲ್ಲಿ ಬರುವ "ಈ ಏಡು ನೇತ್ರಗಳಿಂದ ನೋಡಕಾಗಲ್ಲ ಕಣವ್ವ" ಎಂಬಂತ ಮಾತು ಮಾನವ ಗೆಳತಿಯರ ನಡುವಿನ ದೇವತೆಯ ಮಾತಿನಂತಿದೆ.

"ತನ್ನ ಆಸ್ತಿಯಾದ ಅಳುವ ಅಳಲೂ ತ್ರಾಣವಿಲ್ಲದವಳಾಗಿ ಕಿತ್ತು ತೂರಾಡುತ್ತಿದ್ದ ತನ್ನವು ಕೂದಲುಗಳ ತನ್ನೇಡು ಕೈಗಳಿಂದಲೂ  ಬಾಚಿಕೊಳ್ಳುತ್ತಾ" ಎಂದು ಮುಂತಾದವೆಲ್ಲಾ ಬಂದು ಇದು ಕಾದಂಬರಿಯ ಚಾಲ್ತಿಗದ್ಯವಲ್ಲ; ಸಾಂದ್ರಭಾವದ ಸುಂದರಕಾವ್ಯ.

“ಕಣ್ಣ ಅರತಗದು ಸುತ್ತಲ ಜನ್ವ ನೋಡಿ ಕಣ್ಣು ಮುಚ್ಚಿ ಆಮ್ಯಾಲೆ ಅರಗಣ್ಣು ಬುಟ್ಟು ಮುಚ್ಚಿ ಈ ಪ್ರಕಾರ ಮಾಡುತಲಿತ್ತು”

“ಅವನ ದುಃಖ ಆ ಗುಳ್ಳು ಆವರಿಸಿ ಆ ಗುಳ್ಳಿಂದಲೂ ಎದ್ದು ಆ ಊರ ಆವರಿಸಿಕೊಂಡಿತು ಆ ಊರಿಂದಲೂ ಎದ್ದು ಬಾನು ತುಂಬಿತು”

“ಬಂದವರು ಯಾರ. ಹೋದವರು ಯಾರ. ಯಾರೋ ಬಂದರು. ಬಂದವರು ಯಾರೋ ಆ ಮೂಳ್ವ ಗೋರ್ಕಂಡರು.....”

ಇದೆಲ್ಲ ಕನ್ನಡದಲ್ಲಿ ಎಂದೂ ಮೈದೋರದ ಮನೋಹರ ಭಾಷಾ ಸರಸ್ವತಿಯ ಅಪೂರ್ವಸೊಬಗು. ಕುಸುಮಬಾಲೆಯೊಂದು ಲಯಬದ್ಧವಾದ ಪದ್ಯಗಂಧೀ ಕಾವ್ಯ. ಇಲ್ಲಿ ಬಳಸಿರುವ ಭಾಷೆಯ ರೂಪ ಗದ್ಯವೇ ಅಲ್ಲ, ಅದು ಛಂದೋಗಂಧಿಯಾದ ಪದ್ಯ. ಹಾಗೆಂದು ಅದು ಶರಣರ ವಚನದ ಲಯದಲ್ಲೂ ಇಲ್ಲ. ಮಹಾದೇವ ಇಲ್ಲಿ ಕಾವ್ಯಕ್ಕೆ ಬಳಕೆಯಾಗಬಲ್ಲ ಅಭಿನವ ರೀತಿಯ ಪದ್ಯಶೈಲಿಯನ್ನು ರಾಜಸೂಯದ ಕುದುರೆಯನ್ನೆಂತೋ ಅಂತೆ ಬಿಟ್ಟಿದ್ದಾರೆ. ಇದನ್ನು ಬರೆದ ದೇವನೂರ ಮಹಾದೇವರು – ತಮ್ಮ ಈ ಕೃತಿಯುದ್ದಕ್ಕೂ ಪಾತ್ರಗಳು ತಮ್ಮ ರಕ್ತ ಮತ್ತು ಅನುರಕ್ತಿಗೆ ಅನುಗುಣವಾಗಿಯೇ ಪ್ರಕಟವಾಗುವಲ್ಲಿ ತಮ್ಮ ಪ್ರತಿಷ್ಠೆಯನ್ನು ಮುಂದುಮಾಡದೆ – ಆಗಬೇಕಾದ್ದನ್ನು ಆಗಲು ಒಂದು ಗಿಡಮರವನ್ನಂತೆ ಸಲಹಿ – ಬರಬೇಕಾದ್ದು ಅಷ್ಟೇ ಸಲೀಲವಾಗಿ ಸ್ವಾನುಭಾವಕ್ಕೆ ಬರುವಂತೆ ಬರೆಯುವುದೇ ಮಹಾಕಾವ್ಯವೆಂದು ತಿಳಿದವರು.

ತಮ್ಮ ಮಾತುಕತೆಯ ಮೂಲಕ ಕತೆ ಆರಂಭಿಸುವ ಇಲ್ಲಿನ ಜೋತಮ್ಮಗಳು ಸಮಾಜದ ಮುಖವಾಣಿಗಳಾಗುತ್ತವೆ. ಅಧಿದೇವತೆಗಳಂತೆ ಕಾಣುತ್ತವೆ. ಅಕ್ಕಪಕ್ಕದ ಕೇರಿ ಹೆಣ್ಣುಗಳು ಅಧಿದೇವತೆಗಳಾಗಿದ್ದಾರೆ. ಆ ದೇವತೆಗಳು ಕೇರಿ ಹೆಣ್ಣುಗಳಾಗಿ ಮಾತಾಡುತ್ತಿದ್ದಾರೆ– ಇಲ್ಲಿ ಕತೆಗಾರ ಇಲ್ಲ– ಉದ್ಭವಲಿಂಗದಂತಿರುವುದು ಈ ಹುಟ್ಟುಕತೆ.

ಕುಸುಮಬಾಲೆಯ ಕಥೆಯು ಕಾಲಾನುಕ್ರಮದಲ್ಲಿ ಅದು ಮುಖ್ಯವಾದ ಕಥಾವಸ್ತುವಾಗುವುದಾದರೂ ಅದು ಅಲ್ಲಿಂದ ಹಾಗೆಯೇ ಮುಂದುವರಿಯದೆ, ಸಿಂಹಾವಲೋಕನ ಕ್ರಮದಲ್ಲಿ– ಆ ಕುಸುಮಬಾಲೆಯ ತಂದೆ ಸೋಮಪ್ಪನ, ಅವನ ತಂದೆ ಯಾಡನ, ಅವನ ತಾಯಿ ಅಕ್ಕಮಹಾದೇವಮ್ಮನ ಹಾಗೇ ಕುಸುಮಬಾಲೆಯ ನಲ್ಲ ಚನ್ನನ ಬಂದು ಬಳಗದ ಕತೆಯನ್ನು ಈ ಕೃತಿ ಪ್ರಾರಂಭವಾಗುವುದು ಅಲ್ಲಿಂದಲೇ ಎಂಬಂತೆ ಬಿತ್ತರಿಸುತ್ತದೆ.

ಕುಸುಮಬಾಲೆಯಲ್ಲಿ ದೇವನೂರ ಮಹಾದೇವರು ಅನಿರ್ಬಂಧಿತ ಪ್ರೇಮ ಸುಬಂಧವೆಂಬ ದಾಳಿಯ ಮೂಲಕ ಜಾತಿವ್ಯವಸ್ಥೆಯನ್ನು ಗೇಲಿ ಮಾಡುತ್ತಾ, ಮಾನ್ಯತೆ ಇರುವುದು ಬದುಕುವ ಬದುಕಿನಿಂದಾಗಿಯೇ ಹೊರತು, ಹುಟ್ಟಿದ ಜಾತಿಯಿಂದಲ್ಲವೆನ್ನುತ್ತಾ ಜಾತೀಯತೆಯನ್ನು ಆನುಭಾವಿಕವಾಗಿ ಗೇಲಿ ಮಾಡುತ್ತ, ಅಕ್ಕ

ಮಹಾದೇವಮ್ಮನನ್ನಾಗಲಿ ಕುಸುಮಬಾಲೆಯನ್ನಾಗಲೀ ವ್ಯಭಿಚಾರಿಗಳೆಂದು ಪರಿಗಣಿಸದೆ ಅವರನ್ನು ಕಾವ್ಯ ನಾಯಿಕೆಯರನ್ನಾಗಿ ಮಾಡಿ ಮಹಾಕಾವ್ಯದ ಕಥಾ ವಿಸ್ತಾರವನ್ನು ಬೆಳಸಿರುವ ಈ ಕಾವ್ಯದ ಶರೀರ ಶಾರೀರ ಎರಡನ್ನೂ ಗಮನಿಸಿದರೆ, ರೂಢಿಗತವಾಗಿ ಇದನ್ನೊಂದು ಕಾದಂಬರಿ ಎಂಬಂತೆ ಕರೆಯುವುದು ಅಜ್ಞಾನ. ವಾಸ್ತವವಾಗಿ ಶಿಷ್ಟ ಪರಿಸರವಿಲ್ಲದೆ ಕೇವಲ ಹಳ್ಳಿಗಾಡಿನವರಾಗಿ ಪ್ರಾಕೃತ ಕನ್ನಡವನ್ನೇ ಮಾತಾಡುತ್ತಿರುವ ಈ ತಾಯಂದಿರನ್ನು ಕುರಿತಂತೆ ಅದೇ ಜಾನಪದ ರೂಪದ ಧಾಟಿಯಲ್ಲೇ ಹರಡಿಕೊಂಡಿರುವ ಈ ಕೃತಿಯನ್ನು ಒಂದು ಜಾನಪದ ಕಾವ್ಯವೆಂದು ಮಾತ್ರವಲ್ಲ, ಮಹಾಕಾವ್ಯವೆಂದೇ ನಿರ್ಧರಿಸುವುದು ಒಳ್ಳೆಯದು.

ಒಂದು ದೇಶದ ಜನ ಜಾತ್ಯತೀತವಾಗಿ ಕೂಡಿಬಾಳಬೇಕಾದ ಅಗತ್ಯವನ್ನು ನೇತ್ಯಾತ್ಮಿಕವಾದ ರೀತಿಯಲ್ಲಿ ಆಡು ಮಾತಾಗಿ ಬರೆದ ಈ ಕೃತಿಯ ಈ ಎಲ್ಲ ವಿವೇಕ ವಿಚಾರವೂ ಸಮಾಜದ ಹೊರಮೈಯ ಸ್ಥೌಲ್ಯ ಮತ್ತು ವಿವರಗಳಿಂದ ಸ್ಫೋಟಗೊಳ್ಳದೆ, ಪಾತ್ರಗಳ ಆಂತರಿಕ ಸಂವೇದನೆಗಳ ಪ್ರತಿಮಾತ್ಮಕ ಅಭಿವ್ಯಕ್ತಿ ವಿಧಾನದಿಂದ ಅರಳಿ, ಅನುಭಾವಿಕ ಪರಿಮಳ ಸೂಸುತ್ತ, ಅಲ್ಲಿ ಕಥನ ಕ್ರಿಯೆಯೂ ಘಟನಾತ್ಮಕ ಆರ್ಭಟವಿಲ್ಲದೆ, ಆಂತರಿಕವಾಗಿ ನಡೆಯುವ ಚಿಂತನೆಗಳ ವಿಶ್ಲೇಷಣೆಯ ವೈಖರಿಯಿಂದಲೇ ತನ್ನ ಕೃತಕೃತ್ಯತೆಯನ್ನು ಸಾಧಿಸುತ್ತದೆ. ಈ ಒಂದು ಸುಂದರ ವಾಗ್ವೈಭವದ ನಿರೂಪಣೆಯನ್ನು ಹೀಗೆ ಗದ್ಯವೆಂದು – ಪದ್ಯವೆಂದು ವಿಭಾಗಿಸುವ ಉದ್ದೇಶ ಉದ್ದೇಶಪೂರ್ವಕವೆನ್ನಲು ಆಸ್ಪದವಿದೆ. ತಮ್ಮ ವಾಣಿಯನ್ನು ಹಾಗೆ ವಿಭಾಗಿಸಿ ನೋಡುವ ಕೃತಕತೆಯ ಅಗತ್ಯ ದೇವನೂರರಿಗೆ ಬಂದಿಲ್ಲ. ಜಾತರೂಪ ಕಾವ್ಯವನ್ನು ವರಕವಿಯೊಬ್ಬರು ಭಾವಿಸುವುದೇ ಹೀಗೆ. ಒಮ್ಮೊಮ್ಮೆ ಅವನು ತಾನು ಬರೆದ ಕಾವ್ಯವನ್ನು ತನ್ನದಲ್ಲವೆಂದು ನಿರಾಕರಿಸಿಕೊಳ್ಳುವ ತನ್ಮಯ ಸಾಕ್ಷಿಯಾಗಿ ಬಿಡುತ್ತಾನೆ.

ಆದ್ದರಿಂದಲೇ ಸಾಮಾನ್ಯಾರ್ಥದಲ್ಲಿ ಅದೊಂದು ಕತೆಯೋ ನೀಳ್ಗತೆಯೊ ಕಡೆಗೆ ಕಾದಂಬರಿಯೋ ಆಗದೆ ಮತ್ತು ಪಾತ್ರಗಳು ವಾಚಾಳಿಯಾಗಿರದೆ ಸ್ವಗತಲಹರಿಯಲ್ಲಿ ವಿರಮಿಸಿ, ಆಂತರಂಗಿಕ ಐಕ್ಯಸ್ಥಿತಿಯನ್ನೇ ಬಿಂಬಿಸುವುದರಿಂದ ಅದು ಒಂದು ನಾಟಕವೂ ಆಗದೆ – ಆಡುವ ಉಸುರಿನಂತೆ ಸಹಜ ಸರಾಗ ಸುಲಭವೇ ಆದ ಆಡುಭಾಷೆಯ ಉತ್ತಮ ಕವಿತೆಗಳು ಮೆರವಣಿಗೆ ಹೊರಟ ಒಂದು ಕಾವ್ಯವೋ ಮಹಾಕಾವ್ಯವೋ ಆಗುತ್ತದೆ.

ಈ ಕಾವ್ಯ ಮೆರವಣಿಗೆಯು, ಅದರ ಮೂಲಕೃತಿಯ ಗದ್ಯರೂಪದಲ್ಲಿ ಮಸುಕಾಗಿಬಿಟ್ಟಿರುವುದನ್ನು ಗಮನಿಸಿ, ಓರ್ವ ಪರಿಣಿತ ಸವಾರನು ಕುದುರೆಯನ್ನೇರಿದಂತೆ ಈ ಕಾವ್ಯಲಯಕ್ಕನುಗುಣವಾಗಿ ಆಕಾರ ನೀಡುವ ಕೆಲಸವನ್ನಷ್ಟೆ ನಾನು ಇಲ್ಲಿ ಮಾಡಿದ್ದೇನೆ.

**ಮೈಸೂರು** **ಎಲ್. ಬಸವರಾಜು**
**26–07–2007**